ಹತ್ತಿರದವಳು. ಮತ್ತೊಬ್ಬಾಕೆ ಮುಸ್ಲಿಂ ಹೆಂಗಸು. ಆಕೆ ತನ್ನೆಲ್ಲ ಸಾಂಸಾರಿಕ ಜಂಜಡ ಮತ್ತು ಸಂಕೀರ್ಣತೆಗಳ ನಡುವೆ ತನ್ನ ಇಸ್ಲಾಮಿಕ್ ಬದುಕನ್ನು ಬಿಟ್ಟುಕೊಡದವಳು. ಇಬ್ಬರ ನಡುವೆ ನಿರಂತರ ಮಾತಿನ ಜಟಾಪಟಿ. ಹೊರಗೆ ನಡೆಯುತ್ತಿರುವ ಯುದ್ಧಕ್ಕೂ ಇವರಿಗೂ ಏನೂ ಆಗಬೇಕಾದ್ದಿಲ್ಲವಾದರೂ ತಮ್ಮ ಬದುಕಿಗೆ ಸಂಬಂಧಪಟ್ಟವರು ಅದರಲ್ಲಿ ಸಿಕ್ಕಿ ಹಾಕಿಕೊಂಡಾರು ಎನ್ನುವ ಭಯ ಅವರನ್ನಾವರಿಸಿರುತ್ತದೆ. ಮುಸ್ಲಿಂ ಹೆಂಗಸಿಗೆ ಅಲ್ಲಾಹುವಿನ ಮೇಲಷ್ಟೇ ನಂಬಿಕೆ. ಪಾರ್ಲರ್‌ನ ಹೊರಗೆ ಪರಿಸ್ಥಿತಿ ತುಂಬ ನಾಜೂಕಾಗುತ್ತ ಅದು ಪಾರ್ಲರ್ ಒಳಗೂ ಆತಂಕ ಹೆಚ್ಚಿಸುತ್ತದೆ. ಆಗಲೂ ಅವಳು ಹೊತ್ತು ಹೊತ್ತಿನ ನಮಾಜು ಮಾತ್ರ ತಪ್ಪಿಸುವವಳಲ್ಲ. ಬಜಾರಿ ಹೆಂಗಸು ಎತ್ತುವ ಪ್ರಶ್ನೆಗಳಿಗೆ ಲೈಂಗಿಕಾಸಕ್ತಿಯ ಮಾತುಗಳಿಗೆ ಉಲ್ಲಸಿತಗೊಳ್ಳುವಳಾದರೂ ಅವೆಲ್ಲಕ್ಕೂ ಇಸ್ಲಾಮಿನಲ್ಲಿ ಉತ್ತರ ಹುಡುಕುವ ಯತ್ನ ಮಾಡುವಾಕೆ. ಇಬ್ಬರ ನಡುವಿನ ಸಂಭಾಷಣೆ ಮತ್ತು ಸಂವಾದದ ದೃಶ್ಯಗಳು ಕಚಗುಳಿ ಇಡುವಂಥವು. ಗಂಡನ ಜತೆ ಕಳೆದ ರಾತ್ರಿಗಳ ರಸ ನಿಮಿಷ ನೆನೆದು ತಮಾಷೆ ಮಾಡುವ, ಅನ್ಯ ಹೆಂಗಸರ ಗಂಡಂದಿರನ್ನು ಕಂಡು ಅವನು ನನಗೂ ಒಂದ್ಸಾರಿ ಸಿಗಬೇಕಿತ್ತು ಎನ್ನುವವರೆಗಿನ ಆ ಹೆಣ್ಣುಗಳ ಹಾದರದ ಹಂಬಲ ಇಲ್ಲಿ ಕಾಮಿಡಿಯಾಗಿದೆ! ಮಧ್ಯಪ್ರಾಚ್ಯ ರಾಷ್ಟ್ರಗಳ ಧಾರ್ಮಿಕ ಹಿಂಸಾ ವಿದ್ಯಮಾನಗಳನ್ನು, ಅಲ್ಲಿನ ಸರ್ಕಾರ ತನ್ನ ಪ್ರಜೆಗಳ ಮೇಲೆ ನಡೆಸುತ್ತಿರುವ ದಬ್ಬಾಳಿಕೆಯ ಮನೋಧರ್ಮವನ್ನು ಮತ್ತು ಆ ಮೂಲಕ ಸೃಷ್ಟಿಯಾಗಿರುವ ಇಡೀ ವಿಷಮ ಸ್ಥಿತಿಯನ್ನು ಪಾರ್ಲ್‌ರ್ ಒಳಗಿನ ಘಟನೆಗಳಿಗೆ ಸಮೀಕರಿಸುವ ಒಂದು ವಿಡಂಬನೆಯ ವಿಧಾನ ಈ ಚಿತ್ರವನ್ನು ಭಿನ್ನವಾಗಿಸಿದೆ. ನಿರ್ದೇಶಕರು ಇಡೀ ಚಿತ್ರವನ್ನು ಕಾಮಿಡಿಯಾಗಿಸುತ್ತಲೇ ಗಾಢ ವಿಷಾದವನ್ನೂ ಕಟ್ಟಿಕೊಡುತ್ತಾರೆ. ಚಿತ್ರ ಆ್ಯಕ್ಷನ್ ಪ್ಯಾಕ್ ಆಗುತ್ತಿದ್ದಂತೆ ಹೆಂಗಸರ ನಡುವಿನ ಮಾತಿನ ಚಕಮಕಿ ತುಂಬ ಆಸಕ್ತಿ ಮೂಡಿಸುತ್ತ ತನ್ನ ವಿಡಂಬನೆಯ ಉದ್ದೇಶವನ್ನು ಸುಲಭವಾಗಿ ಈಡೇರಿಸಿಕೊಳ್ಳುತ್ತದೆ.

ತುಂಬ ಮೆಲು ದನಿಯ ಇಂಥ ವಿಡಂಬನೆಯ ವಿಧಾನ, ಗಾಜಾ ಪಟ್ಟಿಯಲ್ಲಿ ಹೆಂಗಸರನ್ನು ಒಳಗೇ ಉಸಿರುಗಟ್ಟಿಸುವಂತೆ ಮಾಡಿರುವ ಸಮಾಜೋಧಾರ್ಮಿಕ ಪರಿಸ್ಥಿತಿಯನ್ನು ಭೇಡಿಸುತ್ತದೆ. ಇಲ್ಲಿ ಅನ್ಯ ಧರ್ಮಿಯರ ಸಹಜ ಬದುಕು, ಸ್ತ್ರೀಯರ ಸೌಂದರ್ಯ ಪ್ರಜ್ಞೆ ಕೂಡ ಕೆಂಗಣ್ಣಿಗೆ ಗುರಿಯಾಗುತ್ತಿದೆ. ಗಂಡುಹೆಣ್ಣಿನ ಸಂಬಂಧಗಳ ವಿಷಯದಲ್ಲೇ ತುಂಬ ಹೇರಿಕೆಗಳಿವೆ. ಸ್ತ್ರೀಯರಿಗೆ ಲೈಂಗಿಕ ಅಭಿಲಾಷೆಗಳನ್ನು ನೇರವಾಗಿ ವ್ಯಕ್ತಪಡಿಸುವುದಾಗಲಿ, ತಮ್ಮ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವುದಾಗಲಿ ಅಷ್ಟು ಸುಲಭ ಸಾಧ್ಯವಿಲ್ಲ. ತಮ್ಮ ಪಾಲಿಗೆ

